**ಎಂ ವಿ ಸಿ 671/2024 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿ: 21.07.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಡಿ ಜಿ ಎನ್ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿದ್ದೇನೆ. 1 ನೇ ಎದುರುದಾರರು ನಮ್ಮ ಊರಿನವರೇ ಆಗಿದ್ದಾರೆ ಎಂದರೆ ಸರಿ. ಅಪಘಾತ ಆದ 19 ದಿನಗಳ ನಂತರ ದೂರು ನೀಡಿದ್ದೇನೆ ಎಂದರೆ ಸರಿ. ಮೈಸೂರಿನ ಕೆನ್ನಾಳು ಆಸ್ಪತ್ರೆಯಲ್ಲಿ ಸುಮಾರು 8-10 ದಿನಗಳ ಕಾಲ ಇದ್ದೆ. ದಿನಾಂಕ 06.12.2023 ರಿಂದ 09.12.2023 ರವರೆಗೆ ಕೆನ್ನಾಳು ಆಸ್ಪತ್ರೆಯಲ್ಲಿ ಇದ್ದೆ ಎಂದು ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ.

ಅಪಘಾತ ಆದ ನಂತರ ನನ್ನನ್ನು ಕೆನ್ನಾಳು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದವರು ಅಪಘಾತದ ಬಗ್ಗೆ ವೈದ್ಯರಿಗೆ ಮಾಹಿತಿಯನ್ನು ನೀಡಿದ್ದರು. ನನಗೆ ಪ್ರಜ್ಞೆ ಬಂದ ನಂತರ ವೈದ್ಯರು ಗಾಯದ ಬಗ್ಗೆ ನನ್ನನ್ನು ಕೇಳಿದಾಗ ನಾನು ನಡೆದುಕೊಂಡು ಬರುತ್ತಿರುವಾಗ ಹಿಂದಿನಿಂದ ಗಾಡಿಯಲ್ಲಿ ಬಂದು ಅಪಘಾತ ಮಾಡಿದ್ದು ಎಂದು ಹೇಳಿರುತ್ತೇನೆ. ಅಪಘಾತ ಸಂಬಂಧ ಆಸ್ಪತ್ರೆಯವರು ಪೊಲೀಸರಿಗೆ ಮಾಹಿತಿ ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುವಂತೆ ನಾನು ವೈದ್ಯರಿಗೆ ಹೇಳಿದ್ದೆ. ನನಗೆ ಪ್ರಜ್ಞೆ ಬಂದ ನಂತರ ಪೊಲೀಸರು ಬಂದು ನನ್ನ ಹೇಳಿಕೆ ಪಡೆದುಕೊಂಡಿಲ್ಲ. ಆಸ್ಪತ್ರೆಯಿಂದ ಬಿಡುಗಡೆಗೊಂಡ ಕೂಡಲೇ ನಾನು ಪೊಲೀಸರಿಗೆ ದೂರನ್ನು ನೀಡಲಿಲ್ಲ. 13 ದಿನಗಳ ನಂತರ ದೂರು ನೀಡಿದೆ. ನಾನು ಮತ್ತು 1 ನೇ ಎದುರುದಾರರು ಒಂದೇ ಊರಿನವರಾಗಿರುವುದರಿಂದ ಪರಸ್ಪರ ಷರೀಕ್ಕಾಗಿ 19 ದಿನಗಳ ನಂತರ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ಅಪಘಾತ ಆಗದೆ ಇದ್ದರೂ ಸಹ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ.

ನಿಶಾನೆ ಪಿ 6 ರಲ್ಲಿನ ಗಾಯದ ಪ್ರಮಾಣಪತ್ರದಲ್ಲಿ ನನಗೆ ಆಗಿರುವ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಎಂದು ನಮೂದಿಸಿದ್ದಾರೆ ಎಂದರೆ ಸರಿ. ನಾನು ಆಸ್ಪತ್ರೆಯವರ ಜೊತೆ ಷರೀಕ್ಕಾಗಿ ನಿಶಾನೆ ಪಿ 11 ರಿಂದ 33 ರವರೆಗಿನ ಬಿಲ್ಲುಗಳನ್ನು ರೂ. 1,46,000/- ರೂಪಾಯಿಗಳವರೆಗೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಪರಿಹಾರ ಪಡೆಯುವಂತಹ ಗಾಯಗಳು ನನಗೆ ಆಗದೆ ಇದ್ದರೂ ಸಹ ನಾನು ಸುಳ್ಳು ಕೇಸು ದಾಖಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಆಸ್ಪತ್ರೆಯಲ್ಲಿ ಇದ್ದಾಗ ಸಹಾಯಕರನ್ನು ನೇಮಕ ಮಾಡಿಕೊಂಡು ಸಂಬಳ ನೀಡಿರುವ ಸಂಬಂಧ ಯಾವುದೇ ದಾಖಲೆಗಳು ಇಲ್ಲ. ಅಪಘಾತ ಪೂರ್ವದಲ್ಲಿ ನಾನು ವ್ಯವಸಾಯ ಮಾಡಿ ಮಾಸಿಕ ರೂ. 20 ಸಾವಿರ ಸಂಪಾದನೆ ಮಾಡುತ್ತಿದ್ದ ಬಗ್ಗೆ ದಾಖಲೆಗಳು ಇಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**